**O.S**. 25/2017

ಡಿ ಡಬ್ಲ್ಯೂ-**1**

<u>ಸಾಕ್ಷಿಯನ್ನು ದಿಃ**03.04.2024** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲು ವಾದಿಗಳ ಪರ ಶ್ರೀ ಎಸ್ ಎ ಆರ್ ವಕೀಲರಿಂದಃ</u>**

1996 ರಲ್ಲಿ ನಾನು ಮತ್ತು ನನ್ನ ಸಹೋದರ ಕುಟುಂಬದ ಆಸ್ತಿಗಳಾದ ಸರ್ವೆ ನಂ.223/ ಪಿ15, 2 ಎಕರೆ 25 ಗುಂಟೆ ನನ್ನ ತಮ್ಮ ಕೆಂಚಪ್ಪನ ಪಾಲಿಗೆ ಮತ್ತು ನನ್ನ ಪಾಲಿಗೆ 2 ಎಕರೆ 5 ಗುಂಟೆ ಬಂದಿರುತ್ತದೆ. ನಿಡಿ-11 ರ ಪ್ರಕಾರ 4 ಎಕರೆ 25 ಗುಂಟೆ ವಿಭಾಗ ಮಾಡಿಕೊಂಡಿರುತ್ತೇವೆ. ಸದರಿ ಪಾಲು ಮಾಡಿಕೊಳ್ಳುವಾಗ ನನ್ನ ತಾಯಿ ಬದುಕಿದ್ದಳು. ಸದರಿ ಪಾಲು ನಾವಿಬ್ಬರೂ ಸಹೋದರರು ಮತ್ತು ನನ್ನ ತಾಯಿ ಮಧ್ಯೆ ಆಗಿರುತ್ತದೆ. ನನ್ನ ತಾಯಿ ಪಾಲಿಗೆ ಯಾವುದೇ ಆಸ್ತಿ ಕೊಟ್ಟಿಲ್ಲ. ದಿಃ06.03.1996 ರಂದು ಪಾಲು ವಿಭಾಗ ಆಗಿದೆ ಎಂದು ದಾಖಲೆ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಾಲು ವಿಭಾಗದಲ್ಲಿ ಸರ್ವೆ ನಂ.21 ಮತ್ತು ಖಾತಾ ನಂ.192 ಸ್ವತ್ತು ಸೇರಿರಲಿಲ್ಲ ಏಕೆಂದರೆ 1 ಎಕರೆ ಜಮೀನು ನಾನು ಸ್ವಂತ ಖರೀದಿಸಿದ್ದೆ. ಸಾಕ್ಷಿ ತಾನು ಸರ್ವೆ ನಂ.223/ಪಿ14, 1 ಎಕರೆ ಖರೀದಿಸಿರುವುದಾಗ ತಿಳಿಸುತ್ತಾರೆ. ನಾನು ಮಾಡಿರುವಂತಹ ನನ್ನ ಸಹಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ದಿಃ11.07.2013 ರಂದು ಖರೀದಿಸಿದ ದಾನ ಪತ್ರವನ್ನು ತೋರಿಸಿ ಅದರಲ್ಲಿರುವ ತಿಮ್ಮಾರೆಡ್ಡಿ ಮತ್ತು ಜಯಲಕ್ಷ್ಮಿ ಸಹಿಗಳು ಯಾರದು ಎಂದು ಕೇಳಿದಗ ಸಾಕ್ಷಿಯು ತಿಮ್ಮಾರೆಡ್ಡಿ ತನ್ನ ಸಹಿ ಮತ್ತು ಜಯಲಕ್ಷ್ಮಿ ತನ್ನ ಹೆಂಡತಿ ಸಹಿ ಎಂದು ಗುರುತಿಸಿದ್ದಾರೆ. ಸದರಿ ದಾಖಲೆ ದಾನ ಪತ್ರ ಆಗಿದ್ದು ನಿಯಮಾನುಸಾರ ಅದು ಕಡ್ಡಾಯವಾಗಿ ನೊಂದಾಯಿಸಲ್ಪಡುವ ದಾಖಲೆಯಾಗಿರುತ್ತದೆ. ಸಾಕ್ಷಿಗೆ ದಿಃ12.07.2013 ರ ಇನ್ನೊಂದು ದಾನ ಪತ್ರ ತೋರಿಸಿ ತಿಮ್ಮಾರೆಡ್ಡಿ ಮತ್ತು ಜಯಲಕ್ಷ್ಮಿ ಸಹಿಗಳು ನೀವು ಮತ್ತು ನಿಮ್ಮ ಹೆಂಡತಿ ಮಾಡಿರುತ್ತೀರಾ ಎಂದರೆ ಸಾಕ್ಷಿ ದಾಖಲೆ ನೋಡಿ ನಿಜ ಎಂದು ಒಪ್ಪಿರುತ್ತಾರೆ. ಮೇಲೆ ಹೇಳಿದಂತೆ ಈ ದಾಖಲೆಯು ಸಹ ನೊಂದಣಿಯಾಗಿರುವುದಿಲ್ಲ. ಆದ್ದರಿಂದ ದಾಖಲೆಗಳನ್ನು ಮತ್ತು ಸಹಿಗಳನ್ನು ನಿಶಾನೆಗೆ ಒಳಪಡಿಸಿಲ್ಲ( ಈ ಎರಡು ದಾನ ಪತ್ರಗಳು ರೆಫರೆನ್ಸ್

ಗಾಗಿ ಕಡತದಲ್ಲಿ ಇಡಲು ಸೂಚಿಸಲಾಗಿರುತ್ತದೆ ) .

ಸಾಕ್ಷಿಗೆ ಒಂದು ಕಟ್ಟಡ ಕಟ್ಟುತ್ತಿರುವ ಪೋಟೋ ತೋರಿಸಲಾಗಿ ಅದನ್ನು ಯಾರು ಯಾವ ಜಾಗದಲ್ಲಿ ಕಟ್ಟುತ್ತಿದ್ದಾರೆ ಎಂದು ಕೇಳಿದಾಗ ಸಾಕ್ಷಿ ಆ ಪೋಟೊ ನೋಡಿ ತಾನು ಸರ್ವೆ ನಂ.223/ಪಿ14 ರಲ್ಲಿ ಮನೆ ಕಟ್ಟಿಸುತ್ತಿರುವುದಾಗ ಒಪ್ಪಿರುತ್ತಾರೆ. ಸದರಿ ಪೋಟೋ ಡಿಜಿಟಲ್ ಆಗಿರುವುದಿಲ್ಲ, ಅಲ್ಲದೆ ಅದರ ನೆಗಿಟಿವ್ ಸಹ ಇಲ್ಲದಿರುವುದರಿಂದ ನಿಶಾನೆಗೆ ಒಳಪಡಿಸಿರುವುದಿಲ್ಲ. ಸದರಿ ಕಟ್ಟಡವು 4-5 ದಿನಗಳಿಂದ ಕಟ್ಟಿಸುತ್ತಿದ್ದೇನೆ. ಸದರಿ ಕಟ್ಟಡವು 21 X 29 ವಿಸ್ತೀರ್ಣದಲ್ಲಿ ಕಟ್ಟಿಸುತ್ತಿದ್ದೇನೆ. ಸದರಿ ಮನೆ ಕಟ್ಟಲು ಪಂಚಾಯತಿಯಿಂದ ಪರವಾನಿಗೆ ಪಡೆದಿಲ್ಲ. ಏಕೆಂದರೆ ಮುಂದೆ ಆ ಪರವಾನಿಗೆ ಪಡೆಯುತ್ತೇನೆ. ಪಂಚಾಯತಿಗೆ ಪರವಾನಿಗೆ ಕೋರಿ ಹೋದಾಗ ಅಧಿಕಾರಿಗಳು ತಿಂಗಳಾನುಗಟ್ಟಲೆ ಸಮಯ ತೆಗೆದುಕೊಳ್ಳುತ್ತಾರೆ ಅಲ್ಲದೆ ಲಂಚವನ್ನು ಸಹ ಬೇಡುತ್ತಾರೆ. ಈ ಕಾರಣದಿಂದ ಲೈಸನ್ಸ್ ಪಡೆದಿಲ್ಲ ಎಂದರೆ ಸಾಕ್ಷಿ ಸಾಕಷ್ಟು ಮನೆಗಳನ್ನು ಪರವಾನಿಗೆ ಇಲ್ಲದೆ ಕಟ್ಟಿಸಿದ್ದು ತಾನು ಭವಿಷ್ಯದಲ್ಲಿ ಪರವಾನಿಗೆ ಪಡೆಯುತ್ತೇನೆ ಎಂದು ತಿಳಿಸುತ್ತಾರೆ. ಸದರಿ ಮನೆ ಕಟ್ಟಿಸುತ್ತಿರುವ ಜಾಗ ದಾವೆಯಲ್ಲಿ ಇದೆ ಅಂದರೆ ನಿಜ. ಸರ್ವೆ ನಂ.21, 1 ಎಕರೆ ಜಮೀನು ನನ್ನ ಸ್ವಯಾರ್ಜಿತ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.223/ಪಿ14, 1 ಎಕರೆ ಜಮೀನು ನನ್ನ ದೊಡ್ಡಪ್ಪ ಈರಾಭೋವಿ ಆತನ ತಮ್ಮ ಪುಟ್ಟಾಭೋವಿ ಜೊತೆ ಅನುಭವಿಸುತ್ತಿದ್ದರು ಎಂದರೆ ಸುಳ್ಳು. ನನ್ನ ದೊಡ್ಡಪ್ಪ ಮತ್ತು ಪುಟ್ಟಾಭೋವಿ ಮೃತ ಪಟ್ಟ ನಂತರ ನಾನು ಮನೆಯ ಹಿರಿಯ ಸದಸ್ಯನಾಗಿ ಮೋಸ ಮಾಡಿ ಈರಾಭೋವಿ ಕಡೆಯಿಂದ ಖಾತೆ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿಗಳಾಗಿದ್ದರಿಂದ ವಾದಿಗೂ ಹಕ್ಕು ಇದೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತುಗಳ ದಾಖಲೆಗಳನ್ನು ಸೃಷ್ಟಿ ಮಾಡಿ ಆಸ್ತಿಗಳನ್ನು ಕಬಳಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ12.07.2013 ರಂದು ಬರೆದುಕೊಟ್ಟಿರುವ ಎರಡು ದಾನ ಪತ್ರಗಳು ನನ್ನ ಸಹೋದರಿಯರು ಪಾಲು ಕೋರಿ ಕೇಸ್ ಹಾಕುವುದಿಲ್ಲವೆಂದು ಬರವಸೆ ಕೊಟ್ಟಿದ್ದರಿಂದ ಬರೆದುಕೊಟ್ಟೆ ಅದರೆ ಮೋಸ ಮಾಡಿ ಕೇಸ್ ಹಾಕಿರುತ್ತಾರೆ. ವಾದಿಯರಿಗೆ ಬರಬೇಕಾಗಿರುವ ಪಾಲು ಸಿಗಬಾರದು ಎಂಬ ದುರುದ್ದೇಶದಿಂದ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.